# ಮಕ್ಕಳ ಸ್ಕೂಲು ಮೊಬೈಲ್‌ನಲ್ಲರ್ವೇ?

‘ಮಕ್ಕಳಿಸ್ಕೂಲ್ ಮನೇಲಲ್ವೇ’ ಎಂದರು ಟಿ.ಪಿ. ಕೈಲಾಸಂ. ಮನೆಯಲ್ಲಿನ ತರಗತಿ ಮೊಬೈಲ್‌ಗೂ ಬಂದಿರುವ ಕಾಲಘಟ್ಟವಿದು. ವಿದ್ಯಾರ್ಥಿಗಳ ಹೊಸ ನಮೂನೆಯ ಸ್ಕೂಲೀಗ ಮೊಬೈಲ್ ಪರದೆಯ ಮೇಲೆ ತೆರೆದುಕೊಂಡಿದೆ. ಅಂತರ್ಜಾಲವನ್ನು ಕಲಿಕೆಯ ಮಾಧ್ಯಮವನ್ನಾಗಿ ಬಳಸಿಕೊಳ್ಳುತ್ತಿರುವುದು ಹೊಸ ಸಂಗತಿಯೇನಲ್ಲ. ಆದರೆ, ‘ಕೋವಿಡ್ 19’ ವೈರಾಣು ಸೋಂಕಿನ ಭೀತಿಯಲ್ಲಿ ಶಿಕ್ಷಕರು–ವಿದ್ಯಾರ್ಥಿಗಳು ತಂತಮ್ಮ ಮನೆಗಳಲ್ಲೇ ಉಳಿದಿರುವಾಗ ಬೋಧನೆಯ ರೂಪದಲ್ಲಿ ಮೊಬೈಲ್ ಪ್ರಾಮುಖ್ಯತೆ ಪಡೆದುಕೊಂಡಿದೆ. ಕೊರೊನಾ ಆತಂಕ ಬಗೆಹರಿದ ನಂತರವೂ ಈ ಡಿಜಿಟಲ್ ತರಗತಿಗಳು ಮುಂದುವರೆಯುವ ಸಾಧ್ಯತೆಯಿದೆ. ಆದರೆ, ಸಂಪನ್ಮೂಲಗಳ ಸಮಾನ ಹಂಚಿಕೆ ವಾಸ್ತವವಲ್ಲದ ಭಾರತದಂತಹ ದೇಶದಲ್ಲಿ ಆನ್‌ಲೈನ್ ತರಗತಿಗಳು ಎಲ್ಲರಿಗೂ ತಲುಪಬಲ್ಲವೇ ಹಾಗೂ ಸಾಂಪ್ರದಾಯಿಕ ಶಿಕ್ಷಣಕ್ರಮಕ್ಕೆ ಡಿಜಿಟಲ್ ತರಗತಿಗಳು ಪರ್ಯಾಯವಾಗಬಲ್ಲವೇ ಎನ್ನುವ ಪ್ರಶ್ನೆಗಳನ್ನೂ ಕೇಳಿಕೊಳ್ಳಬೇಕು. ಈ ಜಿಜ್ಞಾಸೆಯನ್ನು ಮುಖಾಮುಖಿಯಾಗಿರಿಸಿಕೊಂಡೇ ಮೊಬೈಲ್ ಮೂಲಕ ಪಾಠ ಮಾಡುವ, ಗುರು–ಶಿಷ್ಯರ ನಡುವೆ ಸಂವಹನ ಕಲ್ಪಿಸುತ್ತಿರುವ ಹೊಸ ಟ್ರೆಂಡ್‌ನ ವಿವಿಧ ಆಯಾಮಗಳ ವಿಶ್ಲೇಷಣೆ ಈ ಸಂಚಿಕೆಯ ಅಗ್ರಬರಹ.

■ ಪ್ರವೀಣ ಕುಲಕರ್ಣಿ

